ಉ) ಹಾಗಿದ್ದಲ್ಲಿ, ಸಿಂಧನೂರು ತಾಲ್ಲೂಕಿಗೆ ಐ.ಟಿ.ಐ. ಕಾಲೇಜನ್ನು ಮಂಜೂರು ಮಾಡಲು ಸರ್ಕಾರಕ್ಕಿರುವ ತೊಂದರೆಗಳೇನು?

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಸಿಂಧನೂರು ತಾಲ್ಲೂಕಿನಲ್ಲಿ 1 ಅನುದಾನಿತ ಸಂಸ್ಥೆ ಸೇರಿದಂತೆ 4 ಖಾಸಗಿ ಕೈಗಾರಿಕಾ ತರಬೇತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಆ ಕೇಂದ್ರಗಳ ಮೂಲಕ ತಾಲ್ಲೂಕಿನ ಯುವಕ ಯುವತಿಯರು ಕೌಶಲ್ಯ ತರಬೇತಿ ಪಡೆಯುತ್ತಿದ್ದಾರೆ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ನೇಕಾರರ ಸಮಸ್ಯೆಗಳು

76(355) ಶ್ರೀ ನರೇಂದ್ರಬಾಬು ನೆ.ಲ. (ಮಹಾಲಕ್ಷ್ಮೀ ಲೇಔಟ್) ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಮತ್ತು ಸಣ್ಣ ನೀರಾವರಿ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ನೇಕಾರರ ಸಂಖ್ಯೆ ಎಷ್ಟು;

ಆ) ನೇಕಾರರು ಎದುರಿಸುತ್ತಿರುವ ಸಮಸ್ಯೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ನೇಕಾರರ ಸಮಸ್ಯೆಗಳಿಗೆ ಸರ್ಕಾರ ತೆಗೆದುಕೊಂಡ ಕ್ರಮವೇನು;

ಈ) ರಾಜ್ಯ ಸರ್ಕಾರ ನೇಕಾರರಿಗೆ ನೀಡುತ್ತಿರುವ ಸೌಲಭ್ಯಗಳೇನು; (ವಿವರ ನೀಡುವುದು)?

ಶ್ರೀ ಗೋವಿಂದ ಎಂ. ಕಾರಜೋಳ (ಕನ್ನಡ ಮತ್ತು ಸಂಸ್ಕೃತಿ ಮತ್ತು ಸಣ್ಣ ನೀರಾವರಿ ಹಾಗೂ ಜವಳಿ ಸಚಿವರು)

ಅ) 1995-96ರ ಗಣತಿ ಪ್ರಕಾರ ರಾಜ್ಯದಲ್ಲಿ ಒಟ್ಟು 3,17,469 ನೇಕಾರರಿರುತ್ತಾರೆ.

ಆ) ಬಂದಿದೆ.

ಇ) ನೇಕಾರರ ಸಮಸ್ಯೆಗಳ ಪರಿಹಾರದ ಸಲುವಾಗಿ ಕೈಮಗ್ಗ ಮತ್ತು ಜವಳಿ ಇಲಾಖೆಯು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.

ಈ) ನೇಕಾರರಿಗೆ ರಾಜ್ಯ ಸರ್ಕಾರವು ಈ ಕೆಳಕಂಡ ಸೌಲಭ್ಯಗಳನ್ನು ನೀಡುತ್ತಿದೆ;

1) ಕೈಮಗ್ಗ ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯದಡಿ:–

(1) ರಾಜ್ಯ ಸರ್ಕಾರ ಶೇ. 20 ರಿಬೇಟ್ ನೀಡುತ್ತದೆ

(2) ರಾಷ್ಟ್ರೀಯ/ರಾಜ್ಯ/ಜಿಲ್ಲಾ ಮಟ್ಟದ ಕೈಮಗ್ಗ ಮೇಳ/ವಿಶೇಷ ಕೈಮಗ್ಗ ಮೇಳಗಳನ್ನು ಆಯೋಜಿಸಲಾಗುತ್ತಿದೆ.

2) ಸಮಗ್ರ ಕೈಮಗ್ಗ ಅಭಿವೃದ್ಧಿ ಯೋಜನೆಯಡಿ:–

(1) ಮಾರುಕಟ್ಟೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.

(2) ಮೂಲಭೂತ ಸೌಕರ್ಯಗಳನ್ನು ನೀಡಲಾಗುತ್ತಿದೆ.

3) ವಸತಿ ಕಾರ್ಯಾಗಾರ ಸೌಲಭ್ಯ

4) ಆರೋಗ್ಯ ವಿಮಾ ಯೋಜನೆಯಡಿ ಕೈಮಗ್ಗ ನೇಕಾರರಿಗೆ ವೈದ್ಯಕೀಯ ಸೌಲಭ್ಯ

5) ಮಹಾತ್ಮಾಗಾಂಧಿ ಬುನ್ಕರ್ ಭೀಮಾ ಯೋಜನೆಯಡಿ ಸಾಮಾಜಿಕ ಭದ್ರತೆ ಸೌಲಭ್ಯ

ರೇಷ್ಮೆ ಕಾರ್ಖಾನೆ ಕೇಂದ್ರಗಳು

77(356) ಶ್ರೀ ನರೇಂದ್ರ ಬಾಬು ನ.ಲ. (ಮಹಾಲಕ್ಷ್ಮೀ ಲೇಔಟ್) ಮಾನ್ಯ ಕಾರ್ಮಿಕ ಹಾಗೂ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ರೇಷ್ಮೆ ಕಾರ್ಖಾನೆ (ಗೂಡು) ಮಾರಾಟ ಕೇಂದ್ರಗಳಿವೆ (ವಿವರ ನೀಡುವುದು);

ಆ) ಈ ಕೇಂದ್ರಗಳಿಗೆ ಅಗತ್ಯ ಮೂಲಭೂತ ಸೌಕರ್ಯ ಸರ್ಕಾರ ಒದಗಿಸಿದೆಯೇ;